14784

146ನೇ ಅಧಿವೇಶನ
ನಿ-330
ಕ್ರ - 105
ಕಂಪ್ಯೂಟರ್

<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಕೆ.ಎ ತಿಪ್ಪೇಸ್ವಾಮಿ, ಶ್ರೀ ಕೆ.ಟಿ ಶ್ರೀಕಂಠೇಗೌಡ, ಶ್ರೀ ಗೋವಿಂದರಾಜು, ಶ್ರೀ ಎಸ್, ಎಲ್ ಬೋಜೇಗೌಡ ಹಾಗೂ ಶ್ರೀ ಸೂರಜ್ ರೇವಣ್ಣ ಇವರುಗಳು ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) 1977ರ ನಿಯಮಗಳ ಷೆಡ್ಯೂಲ್ I & II ತಿದ್ದುಪಡಿ ಮಾಡಿರುವುದರಿಂದ ಹಲವು ಇಲಾಖೆಯ ಮುಖ್ಯಸ್ಥರುಗಳ ಕಾರ್ಯನಿರ್ವಹಣೆ ಅತಂತ್ರದಲ್ಲಿರುವ ಕುರಿತು ನಿಯಮ-330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರಾದ ಕೆಳಕಂಡ ವಿಷಯವನ್ನು ಸದನದಲ್ಲಿ ತಿಳಿಸಲು ಅನುಮತಿ ಕೋರಿರುವ ಬಗ್ಗೆ</u>

ವಿಷಯ: ಭಾರತ ಸಂವಿಧಾನದ 166ನೇ ಅನುಚ್ಛೇದದಲ್ಲಿ ಸರ್ಕಾರದ ವ್ಯವಹಾರ ನಿರ್ವಹಣೆ ಮಾಡಲು ರಾಜ್ಯ ಸರ್ಕಾರಗಳು ರಾಜ್ಯಪಾಲರ ಹೆಸರಿನಲ್ಲಿ ರಚಿಸಬೇಕಾದ ನಿಯಮಗಳು ಸ್ಪಷ್ಟ ಮತ್ತು ನಿರ್ಧಿಷ್ಠ ಪೂರಕವಾಗಿರಬೇಕೆಂದು ಉಲ್ಲೇಖಿಸಲಾಗಿದೆ. ಈ ಅನುಚ್ಛೇಧದ ಅಡಿಯಲ್ಲಿ, ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) 1977 ನಿಯಮಗಳನ್ನು ರಚಿಸಲಾಗಿದೆ ಮತ್ತು ಈ ನಿಯಮಗಳಡಿ ಸೇಡ್ಯುಲ್-I & II ರಲ್ಲಿ ರಾಜ್ಯಸರ್ಕಾರದ ವ್ಯವಹಾರಗಳ ನಿರ್ವಹಣೆಗೆ ಸಚಿವಾಲಯದ ವಿವಿಧ ಇಲಾಖೆಗಳೊಂದಿಗೆ ವ್ಯವಹರಿಸಲು, ಕೆಲಸಗಳನ್ನು ಹಂಚಲಾಗಿದೆ. ರಾಜ್ಯ ಸರ್ಕಾರ, ದಿನಾಂಕ: 30.11.2021 ರಂದು ಮೇಲಿನ ನಿಯಮಗಳಿಗೆ ತಿದ್ದುಪಡಿ ತಂದು, ಹೊಸ ನಿಯಮಗಳು, ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) (ತಿದ್ದುಪಡಿ) ನಿಯಮಗಳು-2021 ಎಂಬ ಶಿರ್ಷಿಕೆ ಪ್ರಕಟಿಸಿದೆ, ಈ ತಿದ್ದುಪಡಿ ನಿಯಮಗಳಲ್ಲಿ ಸೇಡ್ಯುಲ್-II ಕ್ಕೆ ತಿದ್ದುಪಡಿ ತಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶಿರ್ಷಿಕೆ ಅಡಿಯಲಿ "ಎ" ಸಾರ್ವಜನಿಕ ಸೇವೆಗಳು" ಉಪ- ಶಿರ್ಷಿಕೆಯಡಿ ಕ್ರಮ ಸಂಖ್ಯೆ 6ರಲ್ಲಿನ ಮತ್ತು "ಇಲಾಖಾ ಮುಖ್ಯಸ್ಥರ ದರ್ಜೆಯ ಎಲ್ಲಾ ಅಧಿಕಾರಿಗಳ" ಎಂಬ ಪದಗಳನ್ನು ಕೈಬಿಟ್ಟಿದೆ. ಈ ತಿದ್ದುಪಡಿಯಿಂದ, ರಾಜ್ಯ ಸರ್ಕಾರದ 40ಕ್ಕೂ ಹೆಚ್ಚು ಪಟ್ಟು ಇರುವ 'ಇಲಾಖಾ ಮುಖ್ಯಸ್ಥರ ಹುದ್ದೆಗಳ 'ನಿರ್ವಹಣೆ ಅಂದರೆ Cadre Controlling Authorityಗೆ ಸಂಬಂಧಿಸಿದ ಕೆಲಸಗಳು ಸರ್ಕಾರದ ಇಲಾಖಾ ಕಾರ್ಯದರ್ಶಿಗಳ ನಿಯಂತ್ರಣಕ್ಕೆ ಒಳಪಟ್ಟಿರುತ್ತವೆ.ರಾಜ್ಯಸರ್ಕಾರದಲ್ಲಿ ಲೋಕೋಪಯೋಗಿ, ನೀರಾವರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಸತಿ ಮತ್ತು ನಗರಾಭಿವೃದ್ಧಿ ಆರೋಗ್ಯ ಮತ್ತು ವೈದಕೀಯ ಶಿಕ್ಷಣ, ವಾಣಿಜ್ಯ ತೆರಿಗೆ, ಅಬಕಾರಿ, ನಗರ ಯೋಜನೆ, ಶಿಕ್ಷಣ ಇಲಾಖೆ ಮುಂತಾದವುಗಳ ಪ್ರಮುಖ ಇಲಾಖೆಗಳಾಗಿವೆ. ಈ ಪ್ರಮುಖ ಇಲಾಖೆಗಳಲ್ಲಿ ತಾಂತ್ರಿಕ ತಜ್ಞರು, ವಿಷಯ ತಜ್ಞರು ಮತ್ತು ಸಂಶೋಧಕರು ವೃತ್ತಿ ನಿರ್ವಹಿಸುತ್ತಾರೆ. ಉದಾಹಣೆಗೆ, ಇಂಜಿನೀಯರ್ - ಇನ್ - ಚೀಫ್,

ಮುಖ್ಯ ಅಭಿಯಂತರರು, ವಾಣಿಜ್ಯ ಇಲಾಖೆ ಹೆಚ್ಚುವರಿ ಕಮಿಷನರ್‌ಗಳು, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರು, ಶಿಕ್ಷಣ ಇಲಾಖೆ ನಿರ್ದೇಶಕರು, ನಗರ ಯೋಜನೆಯ ನಿರ್ದೇಶಕರು, ಹೆಚ್ಚುವರಿ ಮತ್ತು ಜಂಟಿ ನಿರ್ದೇಶಕರು ಮುಂತಾದವರು, ಈ ಎಲ್ಲ ಇಲಾಖಾ ಮುಖ್ಯಸ್ಥರ ವೇತನವನ್ನು ಅಖಿಲ ಭಾರತೀಯ ಸೇವೆಯಲ್ಲಿರುವ ಅಧಿಕಾರಿಗಳಿಗಿಂತ ಹೆಚ್ಚಾಗಿದೆ, ಮೇಲಿನ ತಿದ್ದುಪಡಿಯಿಂದ ಈ ಇಲಾಖಾ ಮುಖ್ಯಸ್ಥರ ನಿಯಂತ್ರಣ ಅಧಿಕಾರ ಸಂಬಂಧಿಸಿದ ಸರ್ಕಾರದ ಕಾರ್ಯದರ್ಶಿಗಳ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಈ ಕಾರ್ಯದರ್ಶಿಗಳು, ಹುದ್ದೆಯಲ್ಲಿ ಇಲಾಖಾ ಮುಖ್ಯಸ್ಥರಿಗೆ ತತ್ಸಮಾನರು ಅಥವ ಹುದ್ದೆಯಲ್ಲಿ ಕಿರಿಯರು, ಅಲ್ಲದೆ, ಅಂತರ್ ಇಲಾಖಾ ವರ್ಗಾವಣೆ ಅಥವಾ ನಿಯೋಜನೆ ಮೇಲ ಬೇರೆ ಇಲಾಖೆಗಳಿಗೆ, ಈ ಇಲಾಖಾ ಮುಖ್ಯಸ್ಥರನ್ನು ಮತ್ತು ಇತರರನ್ನು ಕಳುಹಿಸಿದಾಗ, ಸಂಬಂಧಿಸಿದ ಇಲಾಖೆಗಳು ಇಂತಹ ಆದೇಶಗಳನ್ನು ಮಾನ್ಯ ಮಾಡದೇ, ಅಧಿಕಾರಿಗಳು ಅತಂತ್ರ ಪರಿಸ್ಥಿತಿಯಲ್ಲಿ ಇರುತ್ತಾರೆ. ಉದಾಹರಣೆಗೆ: ಲೋಕೋಪಯೋಗಿ, ನೀರಾವರಿ, ನಗರಾಭಿವೃದ್ಧಿ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಗಳಲ್ಲಿ ನೇಮಕಾತಿ ಅಥವಾ ನಿಯೋಜನೆ ಮೇರೆಗೆ ನೇಮಿಸಲಾದ ಹಲವಾರು ಮುಖ್ಯ ಇಂಜಿನೀಯರ್, ಹಾಗೂ ಇಂಜಿನೀಯರ್-ಇನ್-ಚೀಫ್ ಮರು ನೇಮಕಾತಿ ಇಲ್ಲದೆ, ಅತಂತ್ರರಾಗಿದ್ದಾರೆ. ಆದ್ದರಿಂದ, ಅಖಿಲಭಾರತೀಯ ಸೇವೆ ಅಧಿಕಾರಿಗಳಿಗೆ ಸಮಾನರಾಗಿ



Generated from eOffice by G JAGADEESHA, CMO-JS(GJ), JOINT SECRETARY, CMO on 14/03/2022 05:15 PM

ವೇತನ ಮತ್ತು ಹುದ್ದೆಯಲ್ಲಿರುವ ಇಲಾಖಾ ಮುಖ್ಯಸ್ಥರನ್ನು, ತಿದ್ದುಪಡಿಗಿಂತ ಮುಂಚೆ ಇದ್ದಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಡಿಯಲ್ಲಿ ಸರ್ಕಾರದ ಮುಖ್ಯಕಾರ್ಯದರ್ಶಿಯವರ ನಿಯಂತ್ರಣದಲ್ಲಿರುವ ಅತ್ಯವಶ್ಯಕ. ಈ ಹಿನ್ನಲೆಯಲ್ಲಿ, ಸಾರ್ವಜನಿಕ ಮಹತ್ವದ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರಿರುತ್ತಾರೆ.

*****

## ಸರ್ಕಾರದ ಉತ್ತರ

ಗೌರವಾನ್ವಿತ ಮಾನ್ಯ ರಾಜ್ಯಪಾಲರ ಅನುಮೋದನೆ ಪಡೆದು, ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) ನಿಯಮಗಳು, 1977ರ ಅನುಸೂಚಿ-IIರಲ್ಲಿನ "ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಡಿಯಲ್ಲಿನ ನಮೂದಿಗೆ ತಿದ್ದುಪಡಿ ಮಾಡಲಾಗಿದೆ. ಈ ತಿದ್ದುಪಡಿಯಿಂದಾಗಿ " ಇಲಾಖಾ ಮುಖ್ಯಸ್ಥರ ದರ್ಜೆಯ ಎಲ್ಲಾ ಅಧಿಕಾರಿಗಳ" ಎಂಬ ಪದಗಳನ್ನು ಕೈಬಿಟ್ಟು ಆದೇಶಿಸಲಾಗಿದೆ. ಈ ತಿದ್ದುಪಡಿ ಹಿನ್ನಲೆಯಲ್ಲಿ ಇದುವರೆವಿಗೆ ಸಿಆಸುಇ (ಸೇವೆಗಳು) ವಿಭಾಗದಲ್ ನಿರ್ವಹಿಸಲಾಗುತ್ತಿದ್ದ, ಪ್ರಧಾನ ಇಂಜಿನಿಯರ್ ಮತ್ತು ಮುಖ್ಯ ಇಂಜಿನಿಯರ್‌ಗಳನ್ನು ಒಳಗೊಂಡಂತೆ ಎಲ್ಲಾ ಇಲಾಖಾ ಮುಖ್ಯಸ್ಥರುಗಳ ಸೇವಾ ವಿಷಯಗಳನ್ನು ಆಯಾ ಸಂಬಂಧಪಟ್ಟ ಇಲಾಖೆಗಳಿಗೆ ಹಿಂದಿರುಗಿಸಲಾಗಿದೆ.

ಮೇಲ್ಕಂಡ ತಿದ್ದುಪಡಿಗೂ ಪೂರ್ವದಲ್ಲಿ ಸಂಬಂಧಪಟ್ಟ ಇಲಾಖೆಗಳು ಇಲಾಖಾ ಮುಖ್ಯಸ್ಥರ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಎಲ್ಲಾ ಪ್ರಸ್ತಾವನೆಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಕಳುಹಿಸಿಕೊಡುತ್ತಿದ್ದವು. ಇಂತಹ ವಿಷಯಗಳಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಪ್ರತಿ ಹಂತದಲ್ಲೂ ಮತ್ತೊಮ್ಮೆ ಸಂಬಂಧಪಟ್ಟ ಆಡಳಿತ ಇಲಾಖೆಗಳ ಅಭಿಪ್ರಾಯವನ್ನು ಪಡೆದ ನಂತರವೇ ಕ್ರಮವಹಿಸುವುದು ಸಂಪೂರ್ಣ ನಕಲು ಕಾರ್ಯವಾಗಿರುತ್ತದೆ(Duplication of work) ಎಂದು ಕಂಡು ಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) ನಿಯಮಗಳು, 1977ಕ್ಕೆ ತಿದ್ದುಪಡಿಯನ್ನು ಕೈಗೊಳ್ಳಲಾಗಿದೆ.

ಈ ಹಿಂದೆ ಕೆಲಸ ಹಂಚಿಕೆ ಮಾಡಿದಾಗ ಇಲಾಖೆಯ ಮುಖ್ಯಸ್ಥರ ಸಂಖ್ಯೆ ಬಹಳ ಕಡಿಮೆ ಇರುತ್ತದೆ. ಪ್ರಸ್ತುತ ರಾಜ್ಯದಲ್ಲಿ ಇಂಜಿನಿಯರ್-ಇನ್-ಚೀಫ್‌ಗಳು ಮತ್ತು ಮುಖ್ಯ ಇಂಜಿನಿಯರ್‌ಗಳು, ಸಾರ್ವಜನಿಕ ನಿರ್ದೇಶನಾಲಯಗಳ ನಿರ್ದೇಶಕರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಇಂತಹ ಅಧಿಕಾರಿಗಳ ಸೇವಾ ವಿಷಯಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ನಿರ್ವಹಿಸುವುದರಿಂದ ಸಮಯ ಮತ್ತು ಶ್ರಮದ ವ್ಯಯವಾಗುತ್ತದೆ.

ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977ರ ಅನುಸೂಚಿ-IIರ ಕ್ರಮ ಸಂಖ್ಯೆ 8, 9, 10 ರನ್ವಯ ಕರ್ನಾಟಕ ಆಡಳಿತ ಸೇವೆ (ಗ್ರೂಪ್-ಎ) ಹಿರಿಯ ಶ್ರೇಣಿ ಮತ್ತು ಮೇಲ್ಪಟ್ಟ ವೇತನ ಶ್ರೇಣಿಯುಳ್ಳ ದರ್ಜೆಗೆ ಸಮನಾದ ಅಧಿಕಾರಿಯ ವಿರುದ್ಧದ ದೂರು ಹಾಗೂ ಶಿಸ್ತು ಪ್ರಕರಣಗಳನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಬೇಕಾಗಿರುತ್ತದೆ. ಅದೇ ರೀತಿ ಕ್ರಮ ಸಂಖ್ಯೆ:11(b)ರಂತೆ ಇಲಾಖಾ ಮುಖ್ಯಸ್ಥರ ನೇಮಕಾತಿ ಮತ್ತು ಸ್ಥಳನಿಯುಕ್ತಿಯ ಎಲ್ಲಾ ಪ್ರಸ್ತಾವನೆಗಳನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಬೇಕಾಗಿರುತ್ತದೆ. ಇದರಿಂದಾಗಿ ಇಲಾಖಾ ಮುಖ್ಯಸ್ಥರ ನೇಮಕಾತಿ ಮತ್ತು ಸ್ಥಳನಿಯುಕ್ತಿಗೆ ಸಂಬಂಧಿಸಿದ ಹಾಗೂ ಎಲ್ಲಾ ಸೇವಾ ವಿಷಯಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದಾಗಲೀ ಅಥವಾ ಸಂಬಂಧಿತ ಆಡಳಿತ ಇಲಾಖೆಗಳಿಂದಾಗಲೀ ವ್ಯವಹರಿಸಲ್ಪಟ್ಟಿದ್ದರೂ ಸಹ ಮಾನ್ಯ ಮುಖ್ಯ ಮಂತ್ರಿಯವರ ಅನುಮೋದನೆ ಅಗತ್ಯವಾಗಿರುತ್ತದೆ ಎಂಬುದು ಸ್ಪಷ್ಟವಾಗಿರುತ್ತದೆ.



Generated from eOffice by G JAGADEESHA, CMO-JS(GJ), JOINT SECREATARY, CMO on 14/03/2022 05:15 PM

ಈ ಹಿನ್ನೆಲೆಯಲ್ಲಿ ಕೆಲಸದ ನಕಲನ್ನು(Duplication of work) ತಡೆಯಲು ಮತ್ತು ಪ್ರತ್ಯಾಯೋಜನೆಯನ್ನು ಹೆಚ್ಚಿಸಲು ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) ನಿಯಮಗಳು, 1977ಕ್ಕೆ ತಿದ್ದುಪಡಿ ಮಾಡಲಾಗಿದೆ.

ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) ನಿಯಮಗಳು, 1977ಕ್ಕೆ ಮಾಡಿರುವ ತಿದ್ದುಪಡಿಯಿಂದಾಗಿ ಇಲಾಖಾ ಮುಖ್ಯಸ್ಥರುಗಳ ನೇಮಕಾತಿ ವಿಷಯವನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳೇ ನಿರ್ವಹಿಸಬೇಕಾಗುತ್ತದೆ. ಸಂಬಂಧಪಟ್ಟ ಇಲಾಖೆಗಳ/ಸಂಸ್ಥೆಗಳ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಯೋಜನೆ ಕುರಿತು ಉಪಬಂಧಗಳನ್ನು ಕಲ್ಪಿಸಲಾಗುವುದರಿಂದ, ಅದರಂತೆ, ಲೋಕೋಪಯೋಗಿ, ನೀರಾವರಿ ಹಾಗೂ ಇತರೆ ಯಾವುದೇ ಇಲಾಖೆಗಳಲ್ಲಿನ ಮುಖ್ಯ ಇಂಜಿನಿಯರ್ ಹಾಗೂ ಇಂಜಿನಿಯರ್-ಇನ್-ಚೀಫ್‌ಗಳ ನಿಯೋಜನೆ ಮಾಡಬೇಕಾಗುತ್ತದೆ. ಪ್ರತಿಯೊಂದು ಇಲಾಖೆಯು ಇಂತಹ ಇಲಾಖಾ ಮುಖ್ಯಸ್ಥರ ವರ್ಗಾವಣೆ/ಮುಂಬಡ್ತಿ ವಿಷಯಗಳನ್ನು ನಿರ್ವಹಿಸಲು ಸ್ವತಂತ್ರ ಅಧಿಕಾರ ಹೊಂದಿರುತ್ತದೆ.
ಆಡಳಿತಾತ್ಮಕ ಹಿತದೃಷ್ಟಿಯಿಂದ ಅಧಿಸೂಚನೆ ಸಂಖ್ಯೆ: ಸಿಆಸುಇ 11 ಎಆರ್‌ಬಿ 2021, ದಿನಾಂಕ:30.11.2021ರನ್ವಯ ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) ನಿಯಮಗಳು, 1977ಕ್ಕೆ ಮಾಡಿರುವ ತಿದ್ದುಪಡಿಯು ಸೂಕ್ತವಾಗಿರುತ್ತದೆ.

ಸಂಖ್ಯೆ: ಸಿಆಸುಇ 04 ಎಆರ್‌ಬಿ 2022

(ಬಸವರಾಜ ಬೊಮ್ಮಾಯಿ)
ಮುಖ್ಯ ಮಂತ್ರಿ